**ಓ.ಎಸ್.ನಂ. 219/2019**

**ಪಿ.ಡಬ್ಲ್ಯು:1**

ದಿನಾಂಕಃ 02-12-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಬಿ ಆರ್ ಹೆಚ್ ಪ್ರತಿವಾದಿ ಪರ ವಕೀಲರಿಂದಃ-**

ನಾನು ದಾವಾ ಆಸ್ತಿಯನ್ನು ಅನುಸೂಯಮ್ಮ ರವರಿಂದ ಖರೀದಿಸಿರುತ್ತೇನೆ. ಅನುಸೂಯಮ್ಮ ರವರು ನನಗೆ ದಾವಾ ಆಸ್ತಿಯನ್ನು ಮಾರಾಟ ಮಾಡುವುದಕ್ಕಿಂತ ಮುಂಚೆ ಪಾಪಣ್ಣನವರ ಹೆಸರಿನಲ್ಲಿ ಇತ್ತು.ಅನುಸೂಯಮ್ಮನವರಿಂದ ಖರೀದಿಸಿದ ಆಸ್ತಿಯ ಅಸಸ್ಮೆಂಟ್ ಸಂಖ್ಯೆಯನ್ನು ನನಗೆ ಹೇಳಲು ಬರುವುದಿಲ್ಲ. ಅನುಸೂಯಮ್ಮನವರಿಂದ ನಾನು ಎಷ್ಟು ಹಣಕ್ಕೆ ಆಸ್ತಿಯನ್ನು ಖರೀದಿಸಿದ್ದೇನೆಂದು ಈಗ ನನಗೆ ನೆನಪಿಲ್ಲ. ಸುಮಾರು 3,40,000/- ದಿಂದ 3,50,000/- ಕ್ಕೆ ಖರೀದಿಸಬಹುದು ಎಂದು ಹೇಳುತ್ತಾರೆ. ದಾವಾ ಆಸ್ತಿಯ ಚೆಕ್ಕುಬಂಧಿಯನ್ನು ನನಗೆ ಹೇಳಲು ಬರುವುದಿಲ್ಲ. ಪ್ರತಿವಾದಿಯ ವಿರುದ್ದ ನಾನು ನಿವೇಶನಕ್ಕೆ ಸಂಬಂಧಿಸಿದಂತೆ ತಕರಾರು ಮಾಡುತಿದ್ದೇನೆಂದು ದಾವೆಯನ್ನು ಹಾಕಿರುತ್ತಾರೆ. ಪ್ರತಿವಾದಿಯು ಈಗ ಮೈಸೂರಿನಲ್ಲಿ ವಾಸವಿರುತ್ತಾರೆ. ಪ್ರತಿವಾದಿಯು ತುಂಬಾ ವರ್ಷದಿಂದ ಮೈಸೂರಿನಲ್ಲೇ ವಾಸವಿದ್ದಾರೆ. ಪ್ರತಿವಾದಿಗೆ ಮುನಿಸಿಪಾಲಿಟಿಯಿಂದ ಮಂಜುರಾದ ನಿವೇಶನದ ಅಸೆಸ್ಮೆಂಟ್ ನಂ. 4223-18 x 25 ರ ನಿವೇಶನವಾಗಿದ್ದು ಪೂರ್ವಕ್ಕೆಃ ರಸ್ತೆಗೆ ಬಿಟ್ಟಿರುವ ಜಾಗ ಮತ್ತು ರೈಲ್ವೆ ಪ್ರದೇಶ, ಪಶ್ಚಿಮಕ್ಕೆಃ ಲಕ್ಷ್ಮಮ್ಮ ನವರ ಮನೆ ನಿವೇಶನ ಕಲ್ಲು ಪೌಂಡೇಶನ್ ದಿಂದ ಕೂಡಿದ ನಿವೇಶನ, ದಕ್ಷಿಣಕ್ಕೆಃ ಲಕ್ಷ್ಮಿ ಪೌರ ನೌಕರರ ವಾಸದ ಮನೆ ಹಾಗೂ ಪುರಸಭೆ ರಸ್ತೆ ಮತ್ತು ಉತ್ತರಕ್ಕೆಃ ಉಮ್ಲಾ ನಾಯ್ಕ ರವರ ಮನೆ ಹಾಗೂ ರೈಲ್ವೆ ಪ್ರದೇಶ ಬರುತ್ತದೆ ಎಂದರೆ ಸರಿಯಲ್ಲ. ಸದರಿ ಮೇಲೆ ಹೇಳಿದ ಚೆಕ್ಕುಬಂಧಿಯ ನಿವೇಶನದಲ್ಲಿ ಪ್ರತಿವಾದಿಯು ತಂತಿ ಬೇಲಿಯನ್ನು ಹಾಕಿಕೊಂಡು ಸ್ವಾಧೀನ ಹೊಂದಿರುತ್ತಾರೆಂದರೆ ಸರಿಯಲ್ಲ. ದಾವಾ ಆಸ್ತಿಯ ಅಸೆಸ್ಮೆಂಟ್ ಸಂಖ್ಯೆಃ 4229/4092 ಆಗಿರುತ್ತದೆ ಎಂದರೆ ಸರಿ. ನನ್ನ ನಿವೇಶನದ ಅಳತೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿನ ಅಂಶಗಳನ್ನು ನಾನು, ನನ್ನ ಗಂಡ ಮತ್ತು ನನ್ನ ಮಗ ವಕೀಲರಿಗೆ ಹೇಳಿ ಬರೆಸಿರುತ್ತೇವೆ. ದಾವಾ ಸ್ವತ್ತು ಬಳ್ಳಾರಿ ಕ್ಯಾಂಪ್, ಚಿಕ್ಕಿಂಗಳ ರಸ್ತೆಯಲ್ಲಿರುತ್ತದೆ. ಪ್ರತಿವಾದಿಯು ದಾವಾ ಸ್ವತ್ತಿಗೇ ಸಂಬಂಧಿಸಿದಂತೆ ಯಾವುದೇ ತೊಂದರೆಯನ್ನು ನೀಡಿಲ್ಲ. ಪ್ರತಿವಾದಿಯು ಮೈಸೂರಿನಲ್ಲಿದ್ದರು ಸಹ ದಾವಾ ಆಸ್ತಿಗೆ ತೊಂದರೆ ನೀಡುತಿದ್ದಾರೆಂದು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ತಂಟೆ ತಕರಾರನ್ನು ಮಾಡಿರುವುದಿಲ್ಲವೆಂದರೆ ಸರಿಯಲ್ಲ. ನನ್ನ ನಿವೇಶನದ ಅಸೆಸ್ಮೆಂಟ್ ನಂ. 4229/4092 ಆಗಿದ್ದು ಪ್ರತಿವಾದಿಗೆ ಸೇರಿದ ನಿವೇಶನದ ಅಸೆಸ್ಮೆಂಟ್ ನಂ. 4223/4086 ಆಗಿದ್ದು ಇವುಗಳ ಮದ್ಯೆ ಸುಮಾರು 5-6 ನಿವೇಶನಗಳು ಅಂತರವಿರುತ್ತದೆ ಎಂದರೆ ಸರಿಯಲ್ಲ. ಈ ರೀತಿ ಪ್ರತಿವಾದಿಯನಿವೇಶನ ನನ್ನ ನಿವೇಶನದ ಪಕ್ಕ ಬರದಿದ್ದರು ಸಹ ನಾನೇ ಪ್ರತಿವಾದಿಗೆ ತೊಂದರೆ ನೀಡಬೇಕೆಂಬ ಉದ್ದೇಶದಿಂದ ಪ್ರತಿವಾದಿಯ ವಿರುದ್ದ ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗಳು ಮೈಸೂರಿನಲ್ಲಿ ವಾಸವಿರುವುದರಿಂದ ಅವರ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲವೆಂದರೆ

ಸರಿ. ಸಾಕ್ಷಿ ಮುಂದುವರೆದು ಅವರು ನಮ್ಮ ನಿವೇಶನಕ್ಕೆಕಲ್ಲನ್ನು ನೆಡಲು ಬಂದಾಗ ಅವರ ಬಗ್ಗೆ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಪ್ರತಿವಾದಿಯ ವಿಳಾಸವನ್ನು ನಮ್ಮ ನಿವೇಶನದ ಪಕ್ಕದಲ್ಲಿ ಪೆಟ್ಟಿಗೆ ಅಂಗಡಿಯನ್ನು ಇಟ್ಟುಕೊಂಡಿರುವ ವ್ಯಕ್ತಿಯು ಅವರ ಹೆಸರು ಮತ್ತು ವಿಳಾಸವನ್ನು ನನಗೆ ನೀಡಿರುತ್ತಾರೆ. ಪೆಟ್ಟಿಗೆ ಅಂಗಡಿ ಇಟ್ಟುಕೊಂಡವರ ಹೆಸರು ನನಗೆ ಗೊತ್ತಿಲ್ಲ. ಪೆಟ್ಟಿಗೆ ಅಂಗಡಿ ಇಟ್ಟುಕೊಂಡ ವ್ಯಕ್ತಿ ಹೇಳಿದ ಹೆಸರು ಮತ್ತು ವಿಳಾಸದ ಆಧಾರದ ಮೇಲೆ ಪ್ರತಿವಾದಿಯ ವಿರುದ್ದ ದಾವೆಯನ್ನು ಹಾಕಿರುತ್ತೇನೆ. ಪ್ರತಿವಾದಿಯು ನನಗೆ ಯಾವತ್ತು ತಂಟೆ ತಕರಾರನ್ನು ಮಾಡಿರುವುದಿಲ್ಲ ಹಾಗೂ ಪ್ರತಿವಾದಿಯ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ನಾನೇ ಪ್ರತಿವಾದಿಯ ವಿರುದ್ದ ಸುಳ್ಳು ದಾವೆಯನ್ನು ಹಾಕಿರುತ್ತೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

Sd/-
C/c.3 ನೇ.ಹೆ.ಪ್ರ:ದ:ನ್ಯಾ:ದಂ.,ರವರು,
ಕಡೂರು.